ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಸಿಂಡಿಕೇಟ್–29/356 /2024–25 ದಿನಾಂಕ: 03.01.2025

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 31.12.2024 ರಂದು ಜರುಗಿದ 29ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 31.12.2024 ರಂದು ಜರುಗಿದ 29ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಸಿಂಡಿಕೇಟ್-29/356/2024-25 ದಿನಾಂಕ: 03.01.2025

ದಿನಾಂಕ 31.12.2024 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ 29ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ವೈ. ಎನ್. ದೊಡ್ಡಮನಿ<br>ಉಪನಿರ್ದೇಶಕರು<br>ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ಡಾ. ಜ್ಯೋತಿ ವೆಂಕಟೇಶ್ | ಸದಸ್ಯರು |
| 4. | ಡಾ. ಬಿ. ಆರ್. ಸುಪ್ರೀತ್ | ಸದಸ್ಯರು |
| 5. | ಡಾ. ಚೈತ್ರ ಟಿ. ಎಂ. | ಸದಸ್ಯರು |
| 6. | ಡಾ. ಸುಮಯಾ ಫಾತೀಮಾ | ಸದಸ್ಯರು |
| 7. | ಡಾ. ಎಂ. ಆರ್. ಲಕ್ಷ್ಮೀನಾರಾಯಣ | ಸದಸ್ಯರು |
| 8. | ಡಾ. ಎಲಿಝಾಬೆತ್ ಜಾಸ್ಮಿನ್ | ಸದಸ್ಯರು |
| 9. | ಶ್ರೀಮತಿ. ಡಿ. ಆರ್. ಸುಧಾ | ಸದಸ್ಯರು |
| 10. | ಶ್ರೀಮತಿ ಆಯೇಷಾ ಫರ್ಜಾನಾ | ಸದಸ್ಯರು |
| 11. | ಡಾ. ಹೆಚ್. ಕೃಷ್ಣರಾಮ್ | ಸದಸ್ಯರು |
| 12. | ರೆವ್ ಡಾ. ಫ್ರಾನ್ಸಿಸ್ ಅಸಿಸಿ ಅಲ್ಮೇದಾ | ಸದಸ್ಯರು |
| 13. | ಶ್ರೀ ವಿ. ಶಿವಕುಮಾರ್ | ಸದಸ್ಯರು |
| 14. | ಶ್ರೀ ಕೆ.ಪಿ. ಪಾಟೀಲ್ | ಸದಸ್ಯರು |
| 15. | ಶೀಮತಿ. ಶಿಲ್ಪಶ್ರೀ. ವಿ.ಎನ್ | ಸದಸ್ಯರು |
| 16. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 17. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡ ಮಾನ್ಯ ಕುಲಪತಿಗಳಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರುಗಳಿಗೆ ಕುಲಸಚಿವರು ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿ ಸಭೆಗೆ ಚಾಲನೆ ನೀಡಲು ಮಾನ್ಯ ಕುಲಪತಿಗಳಿಗೆ ವಿನಂತಿಸಿದರು.

29ನೇ ಸಿಂಡಿಕೇಟ್ ಸಾಮಾನ್ಯ ಸಭೆಗೆ ಮತ್ತೊಮ್ಮೆ ಎಲ್ಲಾ ಗೌರವಾನ್ವಿತ ಸದಸ್ಯರನ್ನು ಹೃತ್ಪೂರ್ವಕವಾಗಿ ಆಹ್ವಾನಿಸುತ್ತಾ ದಿನಾಂಕ 13.11.2024ರಂದು ಜರುಗಿದ ಅಸಾಮಾನ್ಯ ಸಿಂಡಿಕೇಟ್ ಸಭೆಯಿಂದ

ಇಲ್ಲಿಯವರೆಗೆ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಮಾನ್ಯ ಕುಲಪತಿಗಳು ಸಿಂಡಿಕೇಟ್ ಸಭೆಗೆ ಮಾಹಿತಿ ನೀಡಿದರು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 28(1)(e)ರಡಿಯಲ್ಲಿ ಸಿಂಡಿಕೇಟ್ ಪ್ರಾಧಿಕಾರಕ್ಕೆ ನಾಮನಿರ್ದೇಶಿತರಾದ ಶ್ರೀ ಎಂ. ವಿ. ರಂಗಪ್ಪ ಮತ್ತು ಶ್ರೀ ಸಮರ್ಥ ಮುನಿರಾಜುರವರ ಮೂರು ವರ್ಷಗಳ ಅವಧಿ ದಿನಾಂಕ: 29.11.2024 ರಂದು ಮುಕ್ತಾಯಗೊಂಡಿದ್ದು, ವಿಶ್ವವಿದ್ಯಾನಿಲಯಕ್ಕೆ ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿ ದಾಖಲಿಸಲಾಗುವುದು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 28(1)(e)ರಡಿಯಲ್ಲಿ ಮಾನ್ಯ ಕುಲಾಧಿಪತಿಗಳಿಂದ ನಾಮನಿರ್ದೇಶಿತರಾದ ಡಾ. ಬಿ.ಆರ್. ಸುಪ್ರೀತ್ ಮತ್ತು ಶ್ರೀಮತಿ ಚೈತ್ರ ಟಿ. ಎಂ ರವರು ಇಂದಿನ ಈ ಸಭೆಗೆ ಸ್ವಾಗತಿಸುತ್ತೇನೆ.

3. ನಮ್ಮ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳು ಶೈಕ್ಷಣಿಕ, ಸಂಸ್ಕೃತಿಕ, ಕ್ರೀಡೆ, ಎನ್.ಎಸ್.ಎಸ್ ವಿಸ್ತರಣೆ ಕ್ಷೇತ್ರಗಳಲ್ಲಿ ಅಂತರ ವಿಶ್ವವಿದ್ಯಾನಿಲಯ ರಾಜ್ಯ ಮಟ್ಟದ ದಕ್ಷಿಣ ಭಾರತ ಹಾಗೂ ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆಯನ್ನು ಮಾಡುತ್ತಾ ಬಂದಿದ್ದು, ಪ್ರಸಕ್ತ ಸಾಲಿನಲ್ಲೂ ಈ ಸಾಧನೆಯನ್ನು ಮುಂದುವರೆಸಿದ್ದು, ವಿಶ್ವವಿದ್ಯಾನಿಲಯಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸುತ್ತಾ ವಿಶ್ವವಿದ್ಯಾನಿಲಯದ ಪರವಾಗಿ ಅಭಿನಂದನೆಗಳನ್ನು ತಿಳಿಸಿದರು.

4. 26ನೇ ಜನವರಿ 2025ರಂದು ಜರುಗಲಿರುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸುವ ಎನ್.ಎಸ್.ಎಸ್ ತಂಡದ ರಾಷ್ಟ್ರೀಯ ಮಟ್ಟದ ಆಯ್ಕೆ ಸ್ಪರ್ಧೆಯಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಇಬ್ಬರು ವಿದ್ಯಾರ್ಥಿಗಳಾದ 1) ಚಿರಂತ ಗೌಡ, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಮತ್ತು 2) ಕುಮಾರಿ. ದೇವಿಕಾ. ಬಿ. ಎಸ್. ಜೆ. ಆರ್. ಕಲಾ ಮತ್ತು ವಿಜ್ಞಾನ ಕಾಲೇಜು ರವರು ಎನ್.ಸಿ.ಸಿ ವತಿಯಿಂದ ಜಯನಗರದ ವಿಜಯಾ ಕಾಲೇಜಿನ ಸಿನಿಯರ್ ಅಂಡರ್ ಆಫೀಸರ್ ಚಂದ್ರಶೇಖರ್ ಎನ್. ರವರು ಆಯ್ಕೆಯಾಗಿರುತ್ತಾರೆ. 01-01-2025 ರಿಂದ 31.01.2025ರ ವರೆಗೆ ನವದೆಹಲಿಯಲ್ಲಿ ಜರುಗಲಿರುವ ಗಣರಾಜ್ಯೋತ್ಸವ ಪರೇಡ್ ಕ್ಯಾಂಪಿನಲ್ಲಿ ಈ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಪರವಾಗಿ ಈ ವಿದ್ಯಾರ್ಥಿಗಳಿಗೆ ಶುಭಾಷಯಗಳನ್ನು ವ್ಯಕ್ತಪಡಿಸುತ್ತೇನೆ. ಇದು ನಮ್ಮ ವಿಶ್ವವಿದ್ಯಾನಿಲಯಕ್ಕೆ ಹೆಮ್ಮೆ ಮತ್ತು ಗೌರವದ ಸಂಗತಿ ಎಂದು ತಿಳಿಸಿದರು.

5. ದಿನಾಂಕ 25-12-2024ರಿಂದ 27-12-2024 ವರೆಗೆ ಚೆನ್ನೈನ ಎಸ್. ಆರ್. ಎಂ. ವಿಶ್ವವಿದ್ಯಾಲಯದಲ್ಲಿ ಜರುಗಿದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ರಾಷ್ಟ್ರೀಯ ಪಂದ್ಯಾಟಗಳಲ್ಲಿ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ ಕುಮಾರಿ ನೈಶಾ ಶೆಟ್ಟಿ, ಸೇಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯ ಅ) 100 meter Back stroke ಆ) 50 meter Butterfly ಈಜು ಸ್ಪರ್ಧೆಗಳಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದಿರುತ್ತಾರೆ.

6. ಕುಮಾರಿ ನೈಶಾ ಶೆಟ್ಟಿ ಇವರು ಚೆನ್ನೈನ ಎಸ್. ಆರ್. ಎಂ. ವಿಶ್ವವಿದ್ಯಾಲಯದಲ್ಲಿ ಜರುಗಿದ ದಕ್ಷಿಣ-ಪಶ್ಚಿಮ ವಲಯ (South-West Zone) ಅಂತರ ವಿಶ್ವವಿದ್ಯಾಲಯಗಳ ಪಂದ್ಯಾಟಗಳ ಈಜು ಸ್ಪರ್ಧೆಯ ಅ)100 meter Back stroke ಆ)100 meter Butterfly ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು, ಮತ್ತು ಅ) 100 meter Freestyle ಆ) 50 meter Back stroke ಇ) 50 meter Butterfly ಸ್ಪರ್ಧೆಗಳಲ್ಲಿ ಬೆಳ್ಳಿಯ ಪದಕ ಮತ್ತು ಅ)200 meter Medley ಆ) 50 meter Butterfly ಸ್ಪರ್ಧೆಗಳಲ್ಲಿ ಕಂಚಿನ ಪದಕ

ಗೆದ್ದಿರುತ್ತಾರೆ. ಈ ಸಾಧನೆಗಳಿಂದಾಗಿ ಕುಮಾರಿ ನೈಶಾ ಶೆಟ್ಟಿರವರು "ದಕ್ಷಿಣ-ಪಶ್ಚಿಮ ವಲಯದ ಈಜುಗಾರ್ತಿ" (Swimmer of the South-West Zone) ಎಂಬ ಬಿರುದು ಪಡೆದಿರುತ್ತಾರೆ.

7. ಪುರುಷರ ಈಜು ರಿಲೇ ತಂಡ ಮತ್ತು ಪುರುಷರ ಕರಾಟೆ ತಂಡಗಳು ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆದಿರುತ್ತವೆ.

8. ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ಫೆನ್ಸಿಂಗ್ ಸ್ಪರ್ಧೆಯಲ್ಲಿ ಮಹಿಳಾ ತಂಡ 5ನೇ ಸ್ಥಾನ ಪಡೆದು ಖೇಲೋ ಇಂಡಿಯಾ ವಿಶ್ವವಿದ್ಯಾಲಯಗಳ ರಾಷ್ಟ್ರೀಯ ಪಂದ್ಯಾಟಗಳಲ್ಲಿ ಭಾಗವಹಿಸಲು ಅರ್ಹತೆ ಪಡೆದಿರುತ್ತದೆ.

9. ಕುಮಾರಿ ನೈಶಾ ಶೆಟ್ಟಿ ಖೇಲೋ ಇಂಡಿಯಾ ವಿಶ್ವವಿದ್ಯಾಲಯಗಳ ರಾಷ್ಟ್ರೀಯ ಪಂದ್ಯಾಟಗಳಲ್ಲಿ ಭಾಗವಹಿಸಲು ಅರ್ಹತೆ ಪಡೆದಿರುತ್ತಾರೆ.

10. ದಿನಾಂಕ 19 ರಿಂದ 23 ಡಿಸೆಂಬರ್ 2024 ವರೆಗೆ ನಗರದ ಕ್ರೈಸ್ಟ್ ಡೀಮ್ಡ ವಿಶ್ವವಿದ್ಯಾಲಯದಲ್ಲಿ ಜರುಗಿದ ಭಾರತೀಯ ವಿಶ್ವವಿದ್ಯಾಲಯಗಳ ಸಂಘಟನೆಯ 38ನೇ ದಕ್ಷಿಣ-ಪೂರ್ವ ವಲಯದ ಯುವಜನೋತ್ಸವ-2024 ದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಸ್ಕಿಟ್(ಕಿರುನಾಟಕ) ತಂಡ ಮೊದಲನೆ ಸ್ಥಾನವನ್ನು ಪಡೆದಿರುತ್ತದೆ. ಸೇಂಟ್ ಫ್ರಾನ್ಸಿಸ್ ಕಾಲೇಜಿನ ವಿದ್ಯಾರ್ಥಿಗಳಾದ ನವೀನ್ ಕುಮಾರ, ಅಮಿತ, ನವ್ಯ, ಕಾರ್ತಿಕ, ಖುಷಿ ಮತ್ತು ಕಬಿತಾ ಕುಮಾರಿ ಯವರು ಸ್ಕಿಟ್(ಕಿರುನಾಟಕ) ತಂಡದ ಕಲಾವಿದರಾಗಿ ಭಾಗವಹಿಸಿದರು. ದಕ್ಷಿಣ ಮತ್ತು ಪಶ್ಚಿಮ ವಲಯದ 20ಕ್ಕೂ ಅಧಿಕ ಸಂಖ್ಯೆಯ ವಿಶ್ವವಿದ್ಯಾಲಯಗಳ ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

11. ದಿನಾಂಕ 15.11.2024ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮತ್ತು ಬ್ರಿಟಿಷ್ ಕೌನ್ಸಿಲ್ ಸಂಯುಕ್ತವಾಗಿ ಆಯೋಜಿಸಿದ್ದ "Strengthening Capacity for Internationalization of Indian Higher Education Institutions" ಕುರಿತ ಆನ್ ಲೈನ್ ಸಭೆ ಭಾಗವಹಿಸಲಾಯಿತು.

12. 18.11.2024ರಂದು ಸಂತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು.

13. ದಿನಾಂಕ 19.11.2024 ರಿಂದ 25.11.2024ರ ವರೆಗೆ "ರಾಷ್ಟ್ರೀಯ ಐಕ್ಯತಾ ಸಪ್ತಾಹ" ಅಂಗವಾಗಿ, ಐಕ್ಯತಾ ದಿನಾಚರಣೆಯನ್ನು ಆಚರಿಸಲಾಯಿತು.

14. ದಿನಾಂಕ 26.11.2024 ರಂದು ಆಚರಿಸಲಾದ "ಸಂವಿಧಾನ ದಿನಾಚರಣೆ" ಯಲ್ಲಿ ಆಚರಿಸಲಾಯಿತು. ನ್ಯಾಯವಾದಿಗಳು ಮತ್ತು ಸಿಂಡಿಕೇಟ್ ಸದಸ್ಯರಾಗಿದ್ದ ಶ್ರೀ ಸಮರ್ಥ ಮುನಿರಾಜುರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಂವಿಧಾನದ ಆಶಯಗಳ ಕುರಿತು ಉಪನ್ಯಾಸ ನೀಡಿದರು.

15. ದಿನಾಂಕ 27 ಮತ್ತು 28 ನವೆಂಬರ್2024 ರಂದು ವಿಶ್ವವಿದ್ಯಾನಿಲಯದ 6ನೇ ಅಂತರ ಕಾಲೇಜುಗಳ ವಾರ್ಷಿಕ ಕ್ರೀಡಾಕೂಟ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಜರುಗಿತು.

16. ದಿನಾಂಕ 04.12.2024 ರಂದು ಉನ್ನತ ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತುಗಳ ನೇತೃತ್ವದಲ್ಲಿ ಜರುಗಿದ "Empowering Tomorrow: An Expedition Towards Excellence" MoU Parterners Conclave ಸಮಾವೇಶದಲ್ಲಿ ಭಾಗವಹಿಸಲಾಯಿತು. ಅದೇ ದಿವಸ SCOUT (Scholars for Outstanding Undergraduate Talent) ಕಾರ್ಯಕ್ರಮದ ಅಡಿಯಲ್ಲಿ

ಯು.ಕೆ. ದೇಶದ ಈಸ್ಟ್ ಲಂಡನ್ ವಿಶ್ವವಿದ್ಯಾನಿಲಯಕ್ಕೆ ಶೈಕ್ಷಣಿಕ ಭೇಟಿ ನೀಡಿ ಹಿಂದಿರುಗಿದ ವಿದ್ಯಾರ್ಥಿಗಳ ಅನುಭವಗಳ ವಿನಿಮಯ ಕಾರ್ಯಕ್ರಮ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿತು.

17. ದಿನಾಂಕ 06.12.2024ರಂದು ಡಾ. ಬಿ. ಆರ್. ಅಂಬೇಡ್ಕರ್‌ರವರ ಮಹಾ ಪರಿನಿರ್ವಾಣ ದಿವಸವನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸುವ ಮೂಲಕ ಆಚರಿಸಲಾಯಿತು.

18. ದಿನಾಂಕ 06.12.2024ರಂದು ಮಲ್ಲೇಶ್ವರಂನಲ್ಲಿ ಮೂರು ವರ್ಷಗಳ ಹಿಂದೆ ಸ್ಥಾಪಿಸಲಾದ ವಿಶ್ವದ್ಯಾನಿಲಯದ ಮಹಿಳಾ ಮಹಾವಿದ್ಯಾಲಯದ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು. ಡಾ. ಸಿ. ಎನ್. ಅಶ್ವಥ್‌ನಾರಾಯಣ, ವಿಧಾನ ಸಭಾ ಸದಸ್ಯರು, ಮಾಜಿ ಉಪ ಮುಖ್ಯ ಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸುದರು. ಕುಲಪತಿಗಳು ಅಧ್ಯಕ್ಷತೆ ವಹಿಸಿದ್ದರು. ಸಿಂಡಿಕೇಟ್ ಸದಸ್ಯೆ Ms. Ayesha Farzana ರವರು ಗೌರವ ಅಥಿತಿಗಳಾಗಿ ಆಗಮಿಸಿದರು.

19. ದಿನಾಂಕ 13.12.2024ರಂದು ನೆಲಮಂಗಲ ತಾಲ್ಲೂಕಿನ ಶಿವಗಂಗಾ ಕ್ಷೇತ್ರದಲ್ಲಿ ಜರುಗಿದ ವಿಶ್ವದ್ಯಾನಿಲಯದ ಮಹಿಳಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದ ಉದ್ಘಾಟನಾ ಕಾರ್ಯಕ್ರಮ ಜರುಗಿಸಲಾಯಿತು.

20. ದಿನಾಂಕ 20.12.2024ರಂದು "ರಾಷ್ಟ್ರೀಯ ಗಣಿತಶಾಸ್ತ್ರ ದಿನಾಚರಣೆ" ಯನ್ನು ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ವಿಭಾಗದಲ್ಲಿ ಆಚರಿಸಲಾಯಿತು.

ಮೇಲಿನ ವರದಿಯನ್ನು ಮಂಡಿಸಿದ ನಂತರ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಕಾರ್ಯಸೂಚಿಯನ್ನು ಮಂಡಿಸಲು ತಿಳಿಸಿದರು.

ಅದರಂತೆ ಕುಲಸಚಿವರು ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

**ವಿಷಯ ಸಂಖ್ಯೆ: 01**

ವಿಷಯ: ದಿನಾಂಕ 18.09.2024 ರಂದು ಜರುಗಿದ 28ನೇ ಸಿಂಡಿಕೇಟ್ ಸಾಮಾನ್ಯ ಸಭೆ ಮತ್ತು 13.11.2024 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿ

**ದಿನಾಂಕ 13.11.2024 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳ ಮೇಲೆ ಕೈಗೊಂಡ ಅನುಸರಣಾ ವರದಿ:**

**i.** ದಿನಾಂಕ 13.11.2024 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅನುಸರಣಾ ವರದಿಯ ವಿಷಯ ಸಂಖ್ಯೆ: 8 – M/s. Logisys ಮತ್ತು M/s. Uniclare ಸಂಸ್ಥೆಗಳಿಂದ ನಮ್ಮ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳು ದತ್ತಾಂಶಗಳನ್ನು ಸ್ವಾದೀನಕ್ಕೆ ತೆಗೆದುಕೊಳ್ಳುವ ಕುರಿತು ಸದಸ್ಯರಾದ ಶ್ರೀ. ಶಿವಕುಮಾರ್ ರವರು ಮಾಹಿತಿ ಕೋರಿದರು. ಕುಲಸಚಿವರು (ಮೌಲ್ಯಮಾಪನ) ರವರು ವಿವರಣೆ ನೀಡಿ, ಸದರಿ ಸಂಸ್ಥೆಯವರಿಗೆ ಅಂತಿಮ ಬಿಲ್ಲು ಪಾವತಿಸುವ ಪೂರ್ವದಲ್ಲಿ ವಿದ್ಯಾರ್ಥಿಗಳ ಎಲ್ಲಾ ದತ್ತಾಂಶಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಒಡಂಬಡಿಕೆಯಲ್ಲಿ ಅವಕಾಶ

ಕಲ್ಪಿಸಲಾಗಿದೆ. ಅದರಂತೆ, ಕ್ರಮವಹಿಸಲಾಗುವುದು ಎಂದು ತಿಳಿಸಿದರು. ನಮ್ಮ ವಿಶ್ವವಿದ್ಯಾನಿಲಯಕ್ಕೆ ಸಂಬಂದಿಸಿದಂತೆ, ಸದರಿ ಸಂಸ್ಥೆಗಳು ವಿರುದ್ಧ ಯಾವುದೇ ದೂರು ಸ್ವೀಕರಿಸಿಲ್ಲವೆಂದು ಸ್ಪಷ್ಟಪಡಿಸಿದರು.

ii. ವಿಷಯ ಸಂಖ್ಯೆ: 9 – ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಅಧಿಕಾರ ಕುಲಪತಿಗಳಿಗೆ ನೀಡಲಾಗಿದೆ ಈ ಕುರಿತು ಸರ್ಕಾರಕ್ಕೆ ಪತ್ರ ಬರೆದಿರುವ ಕುರಿತು ಸದಸ್ಯರಾದ ಡಾ. ಕೃಷ್ಣರಾಮ್ ಪ್ರಸ್ತಾಪಿಸಿದರು. ಡಾ. ಬಿ. ಆರ್ ಸುಪ್ರಿತ್ ರವರು, ಸರ್ಕಾರ ಹೊರಡಿಸಿದ ಸುತ್ತೋಲೆಗೆ ಹೈಕೋರ್ಟ ಮಧ್ಯಂತರ ಆದೇಶ ನೀಡಿದ್ದು, ಅದು ಅರ್ಜಿದಾರರಿಗೆ ವ್ಯಕ್ತಿಗತವಾಗಿರುವುದಿಲ್ಲ, ಕಾರಣ, ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಬಹುದು ಎಂದು ಅಭಿಪ್ರಾಯ ಪಟ್ಟರು. ಮಧ್ಯಂತರ ಆದೇಶ ಊರ್ಜಿತದಲ್ಲಿರುವುದನ್ನು ಖಚಿತಪಡಿಸಿಕೊಂಡು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಗಳನ್ನು ಅನುಸರಿಸಿ ಸಮಿತಿಗಳನ್ನು ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಿರುವುದರಿಂದ ಸಿಂಡಿಕೇಟ್ ನಿರ್ಧಾರದಂತೆ ಸರ್ಕಾರದಿಂದ ಸ್ಪಷ್ಟನೆ ಕೋರಲಾಗಿದೆ. ಈ ಕುರಿತು ಕ್ರಮವಹಿಸಲಾಗುವುದು ಎಂದು ತಿಳಿಸಲಾಯಿತು.

***ಸಿಂಡಿಕೇಟ್ ತೀರ್ಮಾನ:***

**ದಿನಾಂಕ 18.09.2024 ರಂದು ಜರುಗಿದ 28ನೇ ಸಿಂಡಿಕೇಟ್ ಸಾಮಾನ್ಯ ಸಭೆ ಮತ್ತು 13.11.2024 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿಗಳನ್ನು ಪರಿಶೀಲಿಸಿ ಅನುಮೋದಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ರಚಿಸಲಾದ ವಿವಿಧ ಸಮಿತಿಗಳ ಅವಧಿಯನ್ನು ಒಂದು ವರ್ಷವೆಂದು ನಿಗದಿಪಡಿಸಲು ಸಭೆ ಸೂಚಿಸಿತು.**

**ವಿಷಯ ಸಂಖ್ಯೆ: 2**

ವಿಷಯ: ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ಬಾಗಲೂರಿನಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ:
1. ಮಾನ್ಯ ಕಂದಾಯ ಸಚಿವರ ಟಿಪ್ಪಣಿ ಸಂಖ್ಯೆ: ಕಂಸ:ಗೃಕ: 664:24–25 ದಿನಾಂಕ:23.08.204.
2. ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ: ಉಶಿಸ/ ಆಕಾ/ 904/2024 ದಿನಾಂಕ: 23.08.2024.
3. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ/ಬ್ಯಾವಿಸ./ವಿಸ್ನಾ.ಕೇ/2024–25/231 ದಿನಾಂಕ: 02.09.2024
4. ಸರ್ಕಾರದ ಪತ್ರ ಸಂಖ್ಯೆ: ಇಡಿ 334 ಯುಬಿವಿ 2024 ದಿನಾಂಕ: 16.11.2024

***ಪರಾಮರ್ಶಕ ಟಿಪ್ಪಣಿ:***

ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ, ಯಲಹಂಕ ತಾಲ್ಲೂಕು, ಜಾಲ ಹೋಬಳಿಯ ಬಾಗಲೂರಿನಲ್ಲಿರುವ ಹಾಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹೊಸ ಕಟ್ಟಡದ ಕೊಠಡಿಗಳು ಹಾಗೂ ಇನ್ನಿತರ ಅಗತ್ಯ ಮೂಲ ಸೌಲಭ್ಯಗಳು ಲಭ್ಯವಿದ್ದು, ಪ್ರಸ್ತುತ ಸಾಲಿನಿಂದ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲು ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಮಾನ್ಯ ಸಚಿವರು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಉಲ್ಲೇಖ (1)ರ ಟಿಪ್ಪಣಿ ಸಲ್ಲಿಸಿದ್ದು, ಸದರಿ ಟಿಪ್ಪಣಿಯ ಮೇಲೆ ಅಗತ್ಯ ಕ್ರಮ

ಕೈಗೊಳ್ಳುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರ ನಿರ್ದೇಶನವನ್ನು ಅವರ ಆಪ್ತ ಕಾರ್ಯದರ್ಶಿಗಳು ಉಲ್ಲೇಖ(2)ರ ಟಿಪ್ಪಣಿ ತಿಳಿಸಿದ್ದಾರೆ.

ಮಾನ್ಯ ಸಚಿವರ ಸೂಚನೆಯಂತೆ, ಉಲ್ಲೇಖ (3) ರ ಈ ಕಛೇರಿ ಪತ್ರದಲ್ಲಿ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಲು ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳು, ಕೋರ್ಸುಗಳು/ವಿಷಯಗಳು ಹಾಗೂ ಅಗತ್ಯವಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳು ಮತ್ತು ಅವುಗಳಿಗೆ ತಗಲುವ ಆವರ್ತಕ/ಅನಾವರ್ತಕ ವೆಚ್ಚಗಳ ವಿವರಗಳನ್ನು ಒಳಗೊಂಡ ವಿವರವಾದ ಪ್ರಸ್ತಾವನೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆಯವರಿಗೆ ಸಲ್ಲಿಸಲಾಗಿದೆ.

ಪ್ರಸ್ತಾಪಿಸಿದ ಸ್ನಾತಕೋತ್ತರ ಪದವಿ ಕೇಂದ್ರದಲ್ಲಿ ಕೆಳಗೆ ನಮೂದಿಸಿರುವ ಕೋರ್ಸುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವುದಾಗಿ ತಿಳಿಸಲಾಗಿದೆ.

a. MA – Kannada and English
b. MCA / M.Sc.
c. M.Com
d. MBA
e. M.Ed / B.Ed
f. University School of Design and Architecture

ಸದರಿ ಸ್ನಾತಕೋತ್ತರಕೇಂದ್ರದಲ್ಲಿ ವಿವಿಧಉದ್ಯಮಗಳ ವೃತ್ತಿಗಳಿಗೆ ಪೂರಕವಾದ ವಾಣಿಜ್ಯ, ವಿಜ್ಞಾನ, ಕಲಾ ನಿಕಾಯಗಳ ಬಹುಬೇಡಿಕೆಯ ವಿಷಯಗಳನ್ನು ಪ್ರಾರಂಭಿಸಲು ಯೋಜಿಸಲಾಗಿದ್ದು, ಈ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಲು ಪ್ರಥಮ ಹಂತದಲ್ಲಿ ಶೈಕ್ಷಣಿಕ ಅಗತ್ಯಗಳ ನಿರ್ವಹಣೆಗೆ ಅತಿಥಿ/ಗೌರವ ಉಪನ್ಯಾಸಕರನ್ನು ನಿಯಮಾನುಸಾರ ಗುತ್ತಿಗೆ ಆಧಾರದ ಮೇಲೆ ಪಡೆಯಲು ಮತ್ತು ಬೋದಕೇತರ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಸರ್ಕಾರದ ಅನುಮೋದನೆ ಕೋರಲಾಗಿದೆ. ಈ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ವಿವಿಧಕೋರ್ಸ್/ವಿಷಯಗಳಿಗೆ ನಿಯಮಾವಳಿಗಳ ಪ್ರಕಾರ ಅಗತ್ಯವಾದ ಬೋಧಕ/ಬೋಧಕೇತರ ಹುದ್ದೆಗಳನ್ನು ಪ್ರಸ್ತಾವನೆಯಲ್ಲಿ ವಿವರಿಸಲಾಗಿದ್ದು, ಸರ್ಕಾರದ ತಾತ್ವಿಕ ಅನುಮೋದನೆ ದೊರೆತ ನಂತರ ಪ್ರಸ್ತಾಪಿಸಲಾದ ಹುದ್ದೆಗಳ ಸೃಜನೆ ಕುರಿತು ಪ್ರತ್ಯೇಕವಾದ ಪರಿನಿಯಮವನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಲಾಗಿದೆ.

ಪ್ರಸ್ತುತ ಸಾಲಿನಿಂದ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಲು ಕೆಳಕಂಡ ವಿಷಯಗಳ ಕುರಿತು ಅನುಮೋದನೆ ನೀಡಲು ಸರ್ಕಾರವನ್ನುಕೋರಲಾಗಿದೆ.

1. ಪ್ರಸ್ತಾಪಿತ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸಲು ಗುರುತಿಸಲಾದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬಾಗಲೂರಿನಲ್ಲಿರುವ ಹಾಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಕಟ್ಟಡವನ್ನು ಸಂಬಂಧಿಸಿದ ಇಲಾಖೆಯಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆಹಸ್ತಾಂತರ ಮಾಡಲು ಕ್ರಮವಹಿಸುವಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ವಿನಂತಿಸಲಾಗಿದೆ.

2. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವನ್ನು ಸ್ವತಂತ್ರವಾಗಿ ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಲು ಅಗತ್ಯವಿರುವ ಭೂಮಿಯನ್ನು ಶೀಘ್ರದಲ್ಲಿ ವಿಶ್ವವಿದ್ಯಾನಿಲಯಕ್ಕೆ ಮಂಜೂರು ಮಾಡಲು ವಿನಂತಿಸಲಾಗಿದೆ.

3. ಖಾಯಂ ಹುದ್ದೆಗಳನ್ನು ನಿಯಮಾನುಸಾರ ಸೃಷ್ಟಿಸುವವರೆಗೆ ಅಗತ್ಯ ಸಂಖ್ಯೆಯ ಬೋಧಕ ಸಿಬ್ಬಂದಿಗಳನ್ನು ಅತಿಥಿ/ಗೌರವ ಉಪನ್ಯಾಸಕರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ಮತ್ತು ಅಗತ್ಯ ಸಂಖ್ಯೆಯ ಬೋಧಕೇತರ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಸರ್ಕಾರದ ಅನುಮೋದನೆಯನ್ನು ಕೋರಲಾಗಿದೆ.

ಪ್ರಸ್ತಾಪಿತ ಸ್ನಾತಕೋತ್ತರ ಕೇಂದ್ರವನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಕೆಳಗೆ ನಮೂದಿಸಿದ ಆವರ್ತಕ/ಅನಾವರ್ತಕ ಅನುದಾನಗಳನ್ನು ಬಿಡಗಡೆ ಮಾಡಲು ವಿನಂತಿಸಲಾಗಿದೆ.

- ಆವರ್ತಕ ಅನುದಾನ ರೂ. 1507.52. ಲಕ್ಷಗಳು
- ಅನಾವರ್ತಕ ಅನುದಾನ ರೂ. 1000.00 ಲಕ್ಷಗಳು

ಮೇಲೆ ನಮೂದಿಸಿದ ಆರ್ಥಿಕ ಹೊರೆಯನ್ನು ಭರಿಸಲು ಸರ್ಕಾರ ಪ್ರತಿ ವರ್ಷ ಅನುದಾನ ಬಿಡುಗಡೆ ಮಾಡಲು ಕೋರಲಾಗಿದೆ.

ಮುಂದಿನ ಶೈಕ್ಷಣಿಕ ವರ್ಷದಿಂದ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಲು ಪ್ರಸ್ತಾಪಿಸಿದ ಕೋರ್ಸುಗಳಿಗೆ ಹಾಗೂ ಆಡಳಿತ ನಿರ್ವಹಣೆಗೆ ಅಗತ್ಯವಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ವಿವರ, ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಿದಲ್ಲಿ ತಗಲುವ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳಿಂದಾಗಿ ಉಂಟಾಗಬಹುದಾದ ಆರ್ಥಿಕ ಹೊರೆ ಇತ್ಯಾದಿಗಳ ವಿವರಗಳನ್ನು ಸಹ ಅನುಬಂಧದಲ್ಲಿ ನೀಡಲಾಗಿದೆ.

ಸದರಿ ಕೇಂದ್ರಕ್ಕೆ ಸೃಜಿಸಬೇಕಾದ ಹೊಸ ಹುದ್ದೆಗಳನ್ನು, ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ಮಂಜೂರಾಗಿರುವ ಹುದ್ದೆಗಳಿಂದಲೇ ಮರುಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆ ಕುರಿತು ಸರ್ಕಾರ ಕೋರಿದ ಮಾಹಿತಿಗೆ, ವಿಶ್ವವಿದ್ಯಾನಿಲಯದ ಪ್ರತಿಯೊಂದು ವಿಭಾಗದ ಬೋಧಕ ಹುದ್ದೆಗಳನ್ನು, ಯು.ಜಿ.ಸಿ ನಿಗದಿಪಡಿಸಿರುವ ಸುಪ್ತಾಕಾರದಲ್ಲಿ (Pyramidical order) 1– ಪ್ರಾಧ್ಯಾಪಕರು, 2–ಸಹಪ್ರಾಧ್ಯಾಪಕರು ಮತ್ತು 4–ಸಹಾಯಕ ಪ್ರಾಧ್ಯಾಪಕರ ಅನುಪಾತದಲ್ಲಿ ಮಂಜೂರಿಸಲಾಗಿದೆ. ಕಾರಣ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ ಮಂಜೂರಿಸಲಾಗಿರುವ ಹುದ್ದೆಗಳು ಆಯಾಯ ವಿಭಾಗಗಳ ಪಾಠಪ್ರವಚನಗಳಿಗೆ ಅಗತ್ಯವಾಗಿರುವುದರಿಂದ, ಈ ಹುದ್ದೆಗಳ ಮರುಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ, ಆದಕಾರಣ ಪ್ರಸ್ತಾಪಿಸಿರುವ ಬೋಧಕ/ಬೋಧಕೇತರ ಹುದ್ದೆಗಳ ಸೃಜನಗೆ ಸರ್ಕಾರದ ಅನುಮೋದನೆ ನೀಡುವ ಅಗತ್ಯವಿದೆ ಎಂದು ತಿಳಿಸಲಾಗಿದೆ.

ಖಾಯಂ ಅಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆಗುವವರೆಗೆ ಅತಿಥಿ ಉಪನ್ಯಾಸಕರ ಸೇವೆ ಪಡೆದು ಕೋರ್ಸು ಪ್ರಾರಂಭಿಸಲು ಹಾಗೂ 56 ಜನ ಅತಿಥಿ ಉಪನ್ಯಾಸಕರಿಗೆ ಸಂದಾಯ ಮಾಡಬೇಕಾದ ಸಂಭಾವನೆ ಮೊತ್ತ ರೂ.336.00 ಲಕ್ಷಗಳ ಅವರ್ತಕ ಅನುದಾನ ಹಾಗೂ ರೂ.500.00 ಲಕ್ಷಗಳ ಮೊತ್ತವನ್ನು ಒಂದು ಗಂಟಿನ ಅನುದಾನವನ್ನು ಮಂಜೂರಿಸಲು ಸರ್ಕಾರವನ್ನು ಕೋರಲಾಗಿದೆ.

ಪ್ರಸ್ತಾಪಿತ ಹುದ್ದೆಗಳ ಸೃಜನೆಗಾಗಿ ಅನುಮೋದನೆ ನೀಡಿ, ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಲು ಸರ್ಕಾರದ ಆದೇಶ ಹೊರಡಿಸಿದ್ದಲ್ಲಿ, ಮುಂದಿನ ಶೈಕ್ಷಣಿಕ ವರ್ಷದಿಂದ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಲು ಅಗತ್ಯ ಕ್ರಮ ವಹಿಸಲಾಗುವುದು ಮತ್ತು ಗುರುತಿಸಲಾಗಿರುವ ಸರ್ಕಾರದ ಜಮೀನನ್ನು ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಿದ ನಂತರ ಅಲ್ಲಿಯ ಅಭಿವೃದ್ಧಿ ಕೆಲಸಗಳಿಗಾಗಿ ವಿಶ್ವವಿದ್ಯಾನಿಲಯದ ಹಾಗೂ ಸರ್ಕಾರದ ಸಹಯೋಗದಿಂದ 25:75ರ ಅನುಪಾತದಲ್ಲಿ ಕ್ಯಾಂಪಸ್ ಅಭಿವೃದ್ಧಿ ಪಡಿಸಲು ಕ್ರಮವಹಿಸಲಾಗುವದು ಎಂದು ಸರ್ಕಾರಕ್ಕೆ ತಿಳಿಸಲಾಗಿದೆ.

ಮೇಲಿನ ವಿಷಯವನ್ನು ಸಿಂಡಿಕೇಟ್ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ಬಾಗೂರಿನಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಸ್ಥಾಪಿಸಲು ತಾತ್ಕಾಲಿಕ ಕಟ್ಟಡ, ಅಗತ್ಯವಾದ ಭೂಮಿ ಹಾಗೂ ಆವರ್ತಕ ಮತ್ತು ಅನಾವರ್ತಕ ಅನುದಾನವನ್ನು ನೀಡಲು ಸರ್ಕಾರದ ಅನುಮತಿ ಪಡೆದು ಪ್ರಸ್ತಾಪಿತ ಸ್ನಾತಕೋತ್ತರ ಕೇಂದ್ರದ ಸ್ಥಾಪನೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 3**

ವಿಷಯ: ರಸಾಯನಶಾಸ್ತ್ರ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡಿ ಆದೇಶ ಹೊರಡಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಬಗ್ಗೆ.

ಉಲ್ಲೇಖ: 1. ವಿ.ವಿ. ಆದೇಶ ಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ&12/ರ.ವಿ.ಮು.ನೇ/2022-23/, ದಿನಾಂಕ: 29.11.2022.
2. ವಿ.ವಿ. ಆದೇಶ ಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ/ರ.ವಿ.ಮು.ನೇ/2024-25/345, ದಿನಾಂಕ: 26.11.2024.

***ಪರಾಮರ್ಶಕ ಟಿಪ್ಪಣಿ:***

ಉಲ್ಲೇಖ (1) ರಆದೇಶದ ಪ್ರಕಾರ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗಕ್ಕೆ ಡಾ. ಎಸ್. ಹರಿಪ್ರಸಾದ್, ಪ್ರಾಧ್ಯಾಪಕರು ಅವರನ್ನು ದಿನಾಂಕ: 01.12.2022 ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಿಆದೇಶ ಹೊರಡಿಸಲಾಗಿರುತ್ತದೆ. ಸದರಿ ವಿಭಾಗದ ಮುಖ್ಯಸ್ಥರ ಅವಧಿಯು ದಿನಾಂಕ: 30.11.2024 ರಂದು ಮುಕ್ತಾಯಗೊಂಡಿರುತ್ತದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಅಧಿಸೂಚನೆ ದಿನಾಂಕ: 11.11.1991ರ ಪರಿನಿಯಮ "Statute Pertaining to Appointment of Chairman, Department of Studies/ Departmental Council by Rotation" ರ ಪ್ರಕಾರ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರ/ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯ ಪ್ರಕಾರ ಕ್ರಮ ಸಂಖ್ಯೆ (2) ರಲ್ಲಿನ ಪ್ರೊ. ಪಿ. ಆರ್. ಚೇತನಾ, ಹಿರಿಯ ಪ್ರಾಧ್ಯಾಪಕರು ಹಿರಿಯವರಾಗಿದ್ದು, ಅವರನ್ನು ದಿನಾಂಕ: 01-12-2024 ರಿಂದ ಜಾರಿಗೆ ಬರುವಂತೆ 02 ವರ್ಷದ ಅವಧಿಗೆ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕಾತಿ ಮಾಡಿ ಉಲ್ಲೇಖಿತ (2)ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲಿನ ವಿಷಯವನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಡಾ. ಪಿ. ಆರ್. ಚೇತನಾ, ಹಿರಿಯ ಪ್ರಾಧ್ಯಾಪಕರನ್ನು ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿತು.**

**ವಿಷಯ ಸಂಖ್ಯೆ: 4**

ವಿಷಯ: ಅಂತರ್ ವಿಶ್ವವಿದ್ಯಾನಿಲಯಗಳ ವರ್ಗಾವಣೆ ಸಂಬಂಧಸಿದಂತೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕ/ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಉಪಬಂಧ 58ರ ಅಡಿಯಲ್ಲಿ ವರ್ಗಾವಣೆ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳ ಕುರಿತು.

***ಪರಾಮರ್ಶಕ ಟಿಪ್ಪಣಿ:***

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಉಪಬಂಧ 58ರ ಅಡಿಯಲ್ಲಿ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆಗೆ ಇರುವ ಅವಕಾಶದ ಅಡಿಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕ/ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ರಾಜ್ಯದ

ಇತರೆ ವಿಶ್ವವಿದ್ಯಾನಿಲಯಗಳ ಅಧ್ಯಾಪಕರು ಮನವಿ ಸಲ್ಲಿಸುತ್ತಿದ್ದು, ಅಂತಹ ಎರಡು ವಿನಂತಿಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1. | ಡಾ. ಕೆ. ಎಸ್. ಚಂದ್ರಶೇಖರಯ್ಯ | ಪ್ರಾಧ್ಯಾಪಕರು,<br>ಜೀವರಸಾಯನಶಾಸ್ತ್ರ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ |
| 2. | ಡಾ. ಎನ್.ಆರ್. ಶ್ರೇಯಸ್ | ಸಹಾಯಕ ಪ್ರಾಧ್ಯಾಪಕರು<br>ವಾಣಿಜ್ಯ ವಿಭಾಗ<br>ಕರ್ನಾಟಕ ವಿಶ್ವವಿದ್ಯಾನಿಲಯ |

ದಿನಾಂಕ: 18.09.2024ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಕೋರಿ ಸಲ್ಲಿಸುತ್ತಿರುವ ವಿನಂತಿಗಳನ್ನು ಹುದ್ದೆ ಸಹಿತವಾಗಿ ವರ್ಗಾವಣೆಗೆ ಮಾತೃ ವಿಶ್ವವಿದ್ಯಾನಿಲಯಗಳು ಒಪ್ಪಿಗೆ ಸೂಚಿಸಿದಲ್ಲಿ ಮಾತ್ರ ಪರಿಗಣಿಸಲು ತೀರ್ಮಾನಿಸಿರುತ್ತದೆ.

ಈ ಹಿನ್ನಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಕೋರಿ ಸಲ್ಲಿಸುತ್ತಿರುವ ಅಭ್ಯರ್ಥಿಗಳ ಕುರಿತಂತೆ ಸ್ಥಾಯಿಯಾಗಿ ತೀರ್ಮಾನ ತಗೆದುಕೊಳ್ಳಲು ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹುದ್ದೆ ಸಹಿತ ವರ್ಗಾವಣೆಗಾಗಿ ಮಾತೃ ವಿಶ್ವವಿದ್ಯಾಲಯದ ಒಪ್ಪಿಗೆ ಪಡೆದು ಸಲ್ಲಿಸುವ ಪ್ರಸ್ತಾವನೆಗಳನ್ನು ಮಾತ್ರ ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 5**

Sub: Proposal to start School of Law in the Bengaluru City University and introduce 5 years integrated LL.B. Regular and 3 years LL.B. and LL.M. courses.

Ref:
1. Letter dated 20.12.2024 received from 3 Syndicate Members
2. This Office letter No.BCU/VCPS/LAW/120/2022-23 dt.27.12.2022 addressed to the Secretary Bar Council of India.
3. ಈ ಕಛೇರಿ ಪತ್ರ ಸಂ. ಬೆಂನವಿ/ಸಿಬ್ಬಂದಿ/1&2/ಎಲ್&ಪಿ/397/2022-23/ ದಿನಾಂಕ 10.02.2022
4. ಈ ಕಛೇರಿ ಪತ್ರ ಸಂ. ಬೆಂನವಿ/ಸಿಬ್ಬಂದಿ/1&2/ಎಲ್&ಪಿ/2022-23/735 ದಿನಾಂಕ 02.08.2022

***Reference Note*:**

Dr. H. Krishna Ram, Sri. K.P. Patil and Smt. Shilpa Shree, Syndicate members of BCU have submitted a representation requesting to introduce School of Law in the Bengaluru City University – 5 years integrated and 3 years LL.B. and LL.M Courses.

**5 years Integrated Programmes**:

i) B.Com. LL.B.

ii) B.Sc. LL.B.

iii) B.A. LL.B.

**3 years LL.B. Course and 2 years LL.M. Course.**

The members opined that introduction of these courses will offer an opportunity to pursue legal education with foundation course in their respective fields. The courses need to be designed as a holistic and contemporary tailored legal education relevant to the evolving needs of society. The key benefits shall be :-

(i) Interdisciplinary Approach – exposing the students to the interdisciplinary knowledge, preparation for careers in diverse fields such as corporate law, environmentallaw, intellectual property rights and related litigations.

(ii) Increased Employability - The blend of professional legal education and foundational knowledge of arts, science and commerce, equip the graduates to excel in their respective areas of expertise.

(iii) Societal Impact – Accessible and affordable legal education will empower the students to contribute effectively to justice and societal development.

(iv) TheHon'ble members have also suggested that the 5 years courses can be structured under self-financed programs, ensuring financial viability while maintaining quality education. The resources could be utilized for building physical, intellectual and technical infrastructure.

It is relevant to mention here that, the Government of Karnataka Dept. of Higher Education has approved for establishment of the Post Graduate Department of Law and Public Policy and sanctioned teaching posts of 1-Professor, 2-Associate Professors and 4-Assistant Professors vide G.O. No. ED 493 UBV(Part-4) dated 07.11.2019. Letters under reference (3) and (4) have been written to the Additional Chief Secretary, Govt. of Karnataka, Higher Education Department to change the nomenclature of Department of Law and Public Policy as School of Law. Simultaneously the Bar Council of India has been approached through the letter cited at ref. (2) to issue N.O.C. for starting the Undergraduate and Post Graduate Courses. The reply from Government and Bar Council of India are awaited.

The subject is placed before the Syndicate for consideration and to submit a proposal seeking the approval of the Government for change of the nomenclature of Department of

Law and Public Policy as "School of Law" and to start UG and P.G. Courses under the Faculty of Law.

<u>**ವಿವರಣೆ:**</u>

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ "ಸ್ಕೂಲ್ ಆಫ್ ಲಾ" ಪ್ರಾರಂಭಿಸಲು ಕುರಿತಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಈಗಾಗಲೇ ಮಂಜೂರಾಗಿರುವ "ಕಾನೂನು ಮತ್ತು ಸಾರ್ವಜನಿಕ ನೀತಿ" "Law Public Policy" ಸ್ನಾತಕೋತ್ತರ ವಿಭಾಗವನ್ನು "School of Law" ಎಂದು ಮಾರ್ಪಾಡು ಮಾಡಿ ಅನುಮೋದನೆ ನೀಡಲು ವಿನಂತಿಸಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಸದಸ್ಯರಾದ ಡಾ. ಎಂ. ಆರ್ ಲಕ್ಷ್ಮಿನಾರಾಯಣರವರು ಬರುವ ಕೆಲವು ವರ್ಷಗಳಲ್ಲಿ ಎಂ.ಎಡ್ ಸ್ವತಂತ್ರ ವ್ಯಾಸಂಗ ಸ್ಥಗಿತಗೊಳಿಸಿ, Integrated B.A-B.Ed, B.Sc-B.Ed, B.Com-B.Ed ವ್ಯಾಸಂಗ ಕ್ರಮಗಳು ಅನುಷ್ಠಾನಗೊಳ್ಳುವ ಸಾಧ್ಯತೆಯ ಹಿನ್ನಲೆಯಲ್ಲಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಈ ಕೋರ್ಸುಗಳನ್ನು ಪ್ರಾರಂಭಿಸಬೇಕೆಂದು ಪ್ರಸ್ತಾಪಿಸಿದರು.

ಕುಲಪತಿಗಳು Teachers Education ಆರಂಭಿಸುವ ಕುರಿತು ವಿವರಣೆ ನೀಡಿ, ಈಗಾಗಲೇ ವಿಶ್ವವಿದ್ಯಾನಿಲಯ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿದೆ UGCಯಿಂದ 12(B) ಮತ್ತು NAAC ಮಾನ್ಯತೆ ಇಲ್ಲದ ಕಾರಣ ಸಾಧ್ಯವಾಗಿಲ್ಲ ಆದಾಗ್ಯೂ ಈ ಕುರಿತು ಪ್ರಯತ್ನ ಮುಂದುವರೆಸುವುದಾಗಿ ತಿಳಿಸಿದರು.

School of Law, School of Education ಮತ್ತು School of Physical Education and Sports Science ಪ್ರಾರಂಭಿಸುವ ಕುರಿತು ಸಮಿತಿಗಳನ್ನು ರಚಿಸಿ, ಈ ವ್ಯಾಸಂಗಗಳನ್ನು ಪ್ರಾರಂಭಿಸಲು ಅಗತ್ಯವಾದ ಮೂಲಭೂತ ಸೌಕರ್ಯ, ಶೈಕ್ಷಣಿಕ ಸೌಲಭ್ಯ, ಹಣಕಾಸು ಹಾಗೂ ಮಾನವ ಸಂಪನ್ಮೂಲಗಳ ಕುರಿತು ವಿಸ್ತೃತವಾದ ವರದಿ ಪಡೆಯಲಾಗುವುದು ಹಾಗೂ ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್ತಿನ ಪರಿಶೀಲನೆಗೆ ಮಂಡಿಸಲಾಗುವುದು ಎಂದು ತಿಳಿಸಿದರು.

<u>*ಸಿಂಡಿಕೇಟ್ ತೀರ್ಮಾನ:*</u>

1. **ಈಗಾಗಲೇ ಮಂಜೂರಾಗಿರುವ "Law Public Policy" ಸ್ನಾತಕೋತ್ತರ ವಿಭಾಗವನ್ನು "School of Law" ಎಂದು ಮಾರ್ಪಡಿಸಲು ಅನುಮೋದನೆ ಕೋರಿ ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.**
2. **School of Law, School of Education ಮತ್ತು School of Physical Education & Sport Science ಪ್ರಾರಂಭಿಸಲು ಅಗತ್ಯವಾದ ಮೂಲಭೂತ ಸೌಲಭ್ಯ ಭೌತಿಕ ಕಟ್ಟಡ, ಶೈಕ್ಷಣಿಕ ಸೌಕರ್ಯ ಮಾನವ ಮತ್ತು ಹಣಕಾಸಿನ ಸಂಪನ್ಮೂಲಗಳ ಕುರಿತು ವಿವರವಾದ ವರದಿ ಸಲ್ಲಿಸಲು ತಜ್ಞರ ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**
3. **ಮೇಲಿನ ಪ್ರಸ್ತಾವನೆಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲು ಸಭೆ ಶಿಫಾರಸ್ಸು ಮಾಡಿತು.**

ವಿಷಯ ಸಂಖ್ಯೆ: 6

Sub: (A) Introduction of New Post Graduate Departments of (i) Psychology, (ii) Food & Nutrition, (iii) Forensic Science and (iv) Embryology and Reproductive Technology.

(B) Starting of Post Graduate Courses in (i) Visual Arts and (ii) Performing Arts in the existing Post Graduate Dept. of Arts and Aesthetics.

(C) Starting of Post Graduate Courses in Development Studies in the existing Post Graduate Dept. of Urban Studies and Planning.

Ref: 1. Letter dated 20.12.2024 received from 3 Syndicate Members
2. G.O. No. ED 493 UBV 2017 (Part-4) dated 07.11.2019.

***Reference Note:***

1) Dr. H. Krishna Ram, Sri. K.P. Patil and Smt. Shilpa Shree, Syndicate members of BCU have submitted a representation requesting to introduce New PG Courses in Visual Arts, Performing Arts, Psychology, Forensic Science, Food & Nutrition, Development Studies and Embryology and Reproductive Technology in the Bengaluru City University. They have emphasized that these courses have potential to attract students who seek specialized knowledge and training in these fields and scientific domains in addition to providing avenues for personal and professional success.

2) It is submitted that the Government of Karnataka, Higher Education Department has accorded approval for establishment of Post Graduate Departments in (i) Arts and Aesthetics and (ii) Urban Studies and Planning. The proposed Visual Arts and Performing Arts courses could be started in the existing Post Graduate Department of Arts and Aesthetics. The Post Graduate Course in Development Studies could be started in the Dept. of Urban Studies and Planning. However the teaching positions sanctioned by the Government for the two departments are in the ratio of 1- Professor, 2-Associate Professors and 4-Assistant Professors. We may have to seek sanction of the Government for the similar number of posts for the Performing Arts Course.

3) With regard to starting of Post-Graduate course in Development Studies, it is submitted that this course could be started in the Department of Urban Studies and Planning. However, the broader structure of the Course needs to be defined.

4) With regard to the proposed new Post Graduate Departments viz. Psychology, Food Science& Nutrition, Forensic Science and Embryology and Reproductive Technology, the courses may be introduced by requesting the Government may to accord permission to

start the proposed four P.G. Departments and to sanction the teaching faculty in the ratio of 1-Professor, 2-Associate Professors and 4-Assistant Professors.

The matter is placed before the Syndicate for consideration and approval.

***ವಿವರಣೆ:***

ಮಾನ್ಯ ಸದಸ್ಯರಾದ ಶ್ರೀ.ಶಿವಕುಮಾರ್ ರವರು ಮಹಾವಿದ್ಯಾಲಯಗಳು ಕೆಲವು ಕೋರ್ಸುಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವುದು, ಪರೀಕ್ಷೆ ಹಾಗೂ ಫಲಿತಾಂಶದಲ್ಲಿ ವಿದ್ಯಾರ್ಥಿಗಳ ಪ್ರಮಾಣ ಇಳಿಮುಖವಾಗುತ್ತಿರುವುದನ್ನು ಪ್ರಸ್ತಾಪಿಸಿದರು. ಮಾನ್ಯ ಕುಲಪತಿಗಳು ಸ್ಪಂದಿಸಿ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಸಂಖ್ಯೆ ಸಾಮಾನ್ಯವಾಗಿ ಏರು ಮುಖವಾಗಿದೆ ಎಂದು ಹೇಳಿ, ಗುಣಮಟ್ಟದಲ್ಲಿ ವ್ಯತ್ಯಾಸ, ನೀತಿ ನಿಯಮಗಳ ಮತ್ತು ಪಠ್ಯಕ್ರಮಗಳ ಬದಲಾವಣೆಗೆ ಮುಂತಾದ ಕಾರಣದಿಂದಾಗಿ ಈ ರೀತಿಯ ವ್ಯತ್ಯಾಸವಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು. ಮಾನ್ಯ ಸದಸ್ಯರ ಆತಂಕ ತಮಗೆ ಅರ್ಥವಾಗಿದೆ ಆ ಕುರಿತು ಗಮನ ಹರಿಸಲಾಗುವುದು ಎಂದು ಹೇಳಿದರು.

ವಿದ್ಯಾರ್ಥಿಗಳ ಹಾಜರಾತಿ ಕುರಿತು ಮಹಾವಿದ್ಯಾಲಯಗಳು ಅನುಸರಿಸುತ್ತಿರುವ ಅಸಂಗತ ಕ್ರಮಗಳ ಕುರಿತು ಕೆಲವು ಸದಸ್ಯರು ಸಭಾಧ್ಯಕ್ಷರ ಗಮನಕ್ಕೆ ತಂದರು. ಕುಲಪತಿಗಳು ಮಾಹಿತಿ ನೀಡಿ, ನಿಗಧಿತ 75%ಗಿಂತ ಕಡಿಮೆ ಹಾಜರಾತಿಗೆ ವಿನಾಯಿತಿ ನೀಡಲು ಅವಕಾಶವಿಲ್ಲವೆಂದು ತಿಳಿಸಿದರು. ಸದಸ್ಯರಾದ ಡಾ. ಬಿ. ಆರ್. ಸುಪ್ರಿತ್ ರವರು ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿ, ವಿದ್ಯಾರ್ಥಿಗಳಿಗೆ ಹಾಜರಾತಿ ಕುರಿತಂತೆ ಅಂತಿಮ ನಿರ್ಧಾರ ಮಹಾವಿದ್ಯಾಲಯ ಪ್ರಾಂಶುಪಾಲರ ಅಂತಿಮ ವಿವೇಚನೆಗೆ ಒಳಪಟ್ಟಿದೆ ಎಂದು ಸಭೆಗೆ ತಿಳಿಸಿದರು.

ಕುಲಸಚಿವರು (ಮೌಲ್ಯಮಾಪನ) ರವರು ವಿವರಣೆ ನೀಡಿ UUCMS ವ್ಯವಸ್ಥೆಯಲ್ಲಿ 75% ಹಾಜರಾತಿ ಇದ್ದಲ್ಲಿ ಮಾತ್ರ ವಿದ್ಯಾರ್ಥಿಗಳನ್ನು ಪರೀಕ್ಷೆಗಳಿಗೆ ಪರಿಗಣಿಸಲಾಗುತ್ತದೆ. ಹಾಜರಾತಿಯ ವಿವರಗಳನ್ನು UUCMSನಲ್ಲಿ Upload ಮಾಡಲು ಆಯಾಯ ಪ್ರಾಂಶುಪಾಲರ ವಿವೇಚನೆಗೆ ಒಳಪಟ್ಟಿದೆ. ಸಂಭ್ರಮ್ ಮಹಾವಿದ್ಯಾಲಯ ಹೊರತು ಪಡಿಸಿ ಬೇರೆ ಯಾವ ಮಹಾವಿದ್ಯಾಲಯಗಳಿಂದ ಹಾಜರಾತಿಗೆ ಸಂಬಂಧಿಸಿದಂತೆ ಯಾವುದೇ ದೂರುಗಳು ಬಂದಿರುವುದಿಲ್ಲ. ಸಂಭ್ರಮ್ ಕಾಲೇಜು ಕುರಿತಂತೆ ಈಗಾಗಲೇ ಕ್ರಮ ಕೈಗೊಂಡು, ಆ ಮಹಾವಿದ್ಯಾಲಯದ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸಿ ಬೇರೆ ಕಾಲೇಜಿಗೆ ವಹಿಸಲಾಗಿದೆ ಎಂದು ತಿಳಿಸಿದರು. Al-Ameen ಕಾಲೇಜಿನಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದರಿಂದ ನಿಯಮಾನುಸಾರ ಹಾಜರಾತಿಯಲ್ಲಿ ವಿನಾಯಿತಿ ನೀಡಲು ಅವಕಾಶವಿದೆ ಎಂದು ತಿಳಿಸಿದರು.

*ಸಿಂಡಿಕೇಟ್ ತೀರ್ಮಾನ:*

A) ಹೊಸ ಸ್ನಾತಕೋತ್ತರ ವಿಭಾಗಗಳಾದ 1) **Psychology** (ಮನೋವಿಜ್ಞಾನ) 2) **Food & Nutrition** (ಆಹಾರ ಮತ್ತು ಪೋಷಣೆ) 3) **Forensic Science** (ವಿಧಿ ವಿಜ್ಞಾನ) 4) **Embryology and Reproductive Technology** (ಭ್ರೂಣಶಾಸ್ತ್ರ ಮತ್ತು ಸಂತಾನೋತ್ಪತ್ತಿ ತಂತ್ರಜ್ಞಾನ) ಪ್ರಾರಂಭಿಸಲು ತಾತ್ವಿಕವಾಗಿ ಒಪ್ಪಿಗೆ ನೀಡಿ ಈ ಹೊಸ ವಿಭಾಗಗಳನ್ನು ಪ್ರಾರಂಭಿಸುವ ಕುರಿತು ಅಗತ್ಯವಾದ ಭೌತಿಕ ಹಾಗೂ ಮೂಲಭೂತ ಸೌಕರ್ಯ, ಕಟ್ಟಡ, ಶೈಕ್ಷಣಿಕ ಸೌಲಭ್ಯ, ಹಣಕಾಸು ಮತ್ತು ಮಾನವ ಸಂಪನ್ಮೂಲಗಳ ಕುರಿತು ವಿವರವಾದ ವರದಿ ಸಲ್ಲಿಸಲು ಡೀನರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು, ವರದಿಗಳನ್ನು ವಿದ್ಯಾವಿಷಯಕ ಪರಿಷತ್ತಿನಲ್ಲಿ ಮಂಡಿಸಲು ಮತ್ತು ಪರಿನಿಯಮಗಳನ್ನು ರಚಿಸಲು ಸಮಿತಿಗೆ ವಹಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.

B) a) **Visual Art** (ದೃಶ್ಯ ಕಲೆಗಳು) b) **Performing Arts** (ಪ್ರದರ್ಶನ ಕಲೆಗಳು) ಸ್ನಾತಕ ಕೋರ್ಸುಗಳನ್ನು ಹಾಗೂ ಸ್ನಾತಕೋತ್ತರ ಕೋರ್ಸುಗಳನ್ನು **Arts and Aesthetics** ಸ್ನಾತಕೋತ್ತರ ವಿಭಾಗದಲ್ಲಿ ಈ ವ್ಯಾಸಂಗಗಳನ್ನು ಪ್ರಾರಂಭಿಸಲು ಅಗತ್ಯವಾದ ಭೌತಿಕ ಸೌಲಭ್ಯ, ಮೂಲಭೂತ ಸೌಕರ್ಯ, ಶೈಕ್ಷಣಿಕ ಅಗತ್ಯ, ಮಾನವ ಸಂಪನ್ಮೂಲ ಹಾಗೂ ಹಣಕಾಸಿನ ಅಗತ್ಯತೆ ಕುರಿತಂತೆ ವರದಿ ಸಿದ್ದಪಡಿಸಲು ತಜ್ಞರ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಹಾಗೂ ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಪರಿಶೀಲನೆಗೆ ಮಂಡಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಲು ತೀರ್ಮಾನಿಸಿತು.

C) **Development Studies** ಸ್ನಾತಕೋತ್ತರ ವ್ಯಾಸಂಗವನ್ನು **Urban Development and Planning** ಸ್ನಾತಕೋತ್ತರ ವಿಭಾಗದ ಅಡಿಯಲ್ಲಿ ಪ್ರಾರಂಭಿಸಲು ಸಿಂಡಿಕೇಟ್ ಸಭೆ ತಾತ್ವಿಕ ಅನುಮೋದನೆ ನೀಡಿ ಈ ವ್ಯಾಸಂಗ ಕುರಿತಂತೆ ವರದಿ ಸಿದ್ದಪಡಿಸಲು ತಜ್ಞರ ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಹಾಗೂ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಪರಿಶೀಲನೆಗೆ ಮಂಡಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು

D) ಮಹಿಳಾ ಅಧ್ಯಯನ ಕೇಂದ್ರ ಸ್ಥಾಪಿಸುವ ಕುರಿತು ಸದಸ್ಯರಾದ ಡಾ. ಹೆಚ್. ಕೃಷ್ಣರಾಮ್‌ರವರು ಸರ್ಕಾರದ ಪತ್ರವನ್ನು ಪ್ರಸ್ತಾಪಿಸಿ, ಮಹಿಳಾ ಅಧ್ಯಯನ ಕೇಂದ್ರ ಪ್ರಾರಂಭಿಸಲು ಕ್ರಮ ವಹಿಸಲು ವಿನಂತಿಸಿದರು. ಸದಸ್ಯರಾದ ಡಾ. ಬಿ. ಆರ್.ಸುಪ್ರಿತ್‌ರವರು ಮಹಿಳಾ ಸಬಲೀಕರಣ, ಕುರಿತಂತೆ ಕೆಲವು ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಜೊತೆಯಾಗಿ ಸಂಶೋಧನೆ ಚಟುವಟಿಕೆಗಳನ್ನು ಮತ್ತು ಅಧ್ಯಯನಗಳನ್ನು ಈ ಕೇಂದ್ರದಲ್ಲಿ ನಡೆಸ ಬಹುದೆಂದು ಸಲಹೆ ನೀಡಿದರು. ಪ್ರಸ್ತಾವನೆಗೆ ತಾತ್ವಿಕವಾಗಿ ಒಪ್ಪಿಗೆ ನೀಡಿ ಮಹಿಳಾ ಅಧ್ಯಯನ ಕೇಂದ್ರದ ರೂಪುರೇಷೆಗಳನ್ನು, ಪ್ರಾರಂಭಿಸಬೇಕಾದ ಕೋರ್ಸುಗಳು ಹಾಗೂ ಸಂಬಂಧಿತ ಚಟುವಟಿಕೆಗಳ ಕುರಿತು ತಜ್ಞರ ಸಮಿತಿ ರಚಿಸಿ ವರದಿ ಪಡೆಯಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ: 7

Sub: Request to Bangalore University to allot 50 Acres of Land for Constructing Hostels for the students of Bengaluru City University.

Ref:
1. Letter dated 20.12.2024 received from 3 Syndicate Members
2. Letter Principal Secretary, Higher Education No. ED 471 UBV 2017dated 06.12.2017 addressed to the Principal Secretary, Revenue Dept.
3. University letter No. ಬೆನವಿ/93/2017-18 dated: 1.1.2018
4. University letter No. ಬೆನವಿ/93/2017-18dated: 22.11.2018
5. Letter of Revenue Secretary to Deputy Commissioner, Bengaluru Urban No. RD/202/LGB/2018 dt. 28.12.2018
6. Letter Principal Secretary, Higher Education No. ED 241 UBV 2022 dated 08.04.2022 addressed to the Principal Secretary, Revenue Dept
7. Letter No. ಜಂನಿ/ಸಕಇ/ಬೆಂ(ನ)/ಎಸ್‌ಸಿಎಸ್‌ಪಿ/ಹೋ.ವಿ/ಸಿ.ಆರ.02/2022-23 ದಿನಾಂಕ. 29.04.2022
8. ಆಯುಕ್ತರು ಬಿ.ಡಿ.ಎಇವರಿಗೆ ಬರೆದ ಪತ್ರ ಸಂಬೆಂ.ನ.ವಿ/373/2021 ದಿನಾಂಕ.08.02.2021
9. ಆಯುಕ್ತರು ಬಿ.ಬಿ.ಎಂ.ಪಿ ಇವರಿಗೆ ಬರೆದ ಪತ್ರ ಸಂಬೆಂ.ನ.ವಿ/373/2021 ದಿನಾಂಕ.08.02.2021
10. ಮಾನ್ಯ ಕುಲಪತಿಗಳು, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಅಧ್ಯಕ್ಷರಿಗೆ ಬರೆದ ಪತ್ರ ಸಂ. ಬೆಂನವಿ/ಕುಪಆ/ಅ.ಸ.ಪತ್ರ/50/2021-22 ದಿನಾಂಕ. 24.12.2021

***Reference Note:-***

Dr. H. Krishna Ram, Sri. K.P. Patil and Smt. Shilpa Shree, Syndicate members of BCU have submitted a representation requesting to request the authorities of Bengaluru University to allot 50 acres of land for constructing Hostels for the Students.

It is pertinent to mention that, the Bengaluru City University has been making consistent efforts for allocation of land within the jurisdiction of the University since 2017. In turn the Government has taken action to write to the Principal Secretary, Revenue Department to take necessary action to identify the land for allocation. The Revenue Secretary has issued direction to the Deputy Commissioner, Bengaluru City District and the instructions were issued to the tahsildar by the Deputy Commissioner. Under the letter at ref.10, Hon'ble Vice-Chancellor has requested to the Chairperson, Bengaluru Development Authority and the Government to allot land in the different assembly segments of the university jurisdiction if the 50 acres of land is not available in one stretch. Two letters under ref (10 &11) were also addressed to the Commissioner, BDA& BBMP to spare land for construction of Students Hostel. The matter is still pending in the Government.

A proposal for sanction of grants for construction of Students Hostels was submitted to the Social Welfare Department. The Jt. Director of Social Welfare Dept. in his letter under ref. 9 has conveyed approval for construction of two hostels and requested to identify the land. Accordingly the land in the Prasanna Kumar Block was identified and informed accordingly to the Social welfare Department. On enquiry it is learnt that, the proposed hostels were not specific to the PG Students of BCU. The proposed Hostels were for the students of all affiliated colleges both UG and PG under Bengaluru City Dist. The Social Welfare Department has been requested to construct the hostel exclusively for the P.G. Students of Bengaluru City University.

The subject is placed before the Syndicate for consideration and approval to request the authorities of Bangalore University to allot 50 acres of land for Bengaluru City University.

***ವಿವರಣೆ:***

ಜಮೀನು ಮಂಜೂರಾತಿಗಾಗಿ ವಿಶ್ವವಿದ್ಯಾನಿಲಯ ಪ್ರಾರಂಭದಿಂದ ಸರ್ಕಾರದೊಂದಿಗೆ ನಡೆಸಿದ ಪತ್ರ ವ್ಯವಹಾರ ಹಾಗೂ ಪ್ರಯತ್ನಗಳ ಕುರಿತು ಸಭೆ ಮೆಚ್ಚುಗೆ ವ್ಯಕ್ತಪಡಿಸಿತು. ಈ ಕುರಿತು ಒಂದು ನಿಯೋಗವಾಗಿ ಮಾನ್ಯ ಮುಖ್ಯಮಂತ್ರಿಗಳೂ ಸೇರಿದಂತೆ ಸಂಬಂಧಿಸಿದ ಮಂತ್ರಿಗಳಿಗೆ ಶಾಸಕರೊಂದಿಗೆ ಭೇಟಿಯಾಗಿ ಮನವರಿಕೆ ಮಾಡಿಕೊಡಬೇಕೆಂದು ಶ್ರೀ ಕೆ. ಪಿ. ಪಾಟೀಲ ಸಲಹೆ ನೀಡಿದರು. ಡಾ. ಹೆಚ್. ಕೃಷ್ಣರಾಮ್ ರವರು ಸೆಂಟ್ರಲ್ ಕಾಲೇಜಿನ 64 ಎಕರೆ ಜಮೀನಿನಲ್ಲಿ UVCE, KSHEC, ರಸ್ತೆ ಅಗಲೀಕರಣ ಮುಂತಾದ ಕಾರಣಗಳಿಂದ ಉಳಿದಿರುವ ಸ್ಥಳದಲ್ಲಿ ಶೈಕ್ಷಣಿಕ ಹಾಗೂ ವಿದ್ಯಾರ್ಥಿ ವಸತಿಗಾಗಿ ಕಟ್ಟಡಗಳನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲ, ಕಾರಣ ನಮ್ಮ ವಿದ್ಯಾರ್ಥಿಗಳಿಗೆ ವಸತಿ ಗೃಹ ಕಟ್ಟಡ ಕಟ್ಟಲು 50 ಎಕರೆ ಜಮೀನು ನೀಡಲು ಸರ್ಕಾರದ ಮುಖಾಂತರ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೂಚಿಸಬೇಕೆಂದು ತಿಳಿಸಿದರು.

***ಸಿಂಡಿಕೇಟ್ ತೀರ್ಮಾನ:***

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟಡ ನಿರ್ಮಿಸಲು 50 ಎಕರೆಜಮೀನು ನೀಡಲು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದ ಮುಖಾಂತರ ವಿನಂತಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 8**

ವಿಷಯ: ವಿಶ್ವವಿದ್ಯಾನಿಲಯ ಅಥವಾ ಅಂಗ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆ ಆಧಾರದಲ್ಲಿ/ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಮಾತೃತ್ವ (ಹೆರಿಗೆ) ರಜೆ ಸೌಲಭ್ಯ ವಿಸ್ತರಿಸುವ ಪ್ರಸ್ತಾವನೆ.

ಉಲ್ಲೇಖ 1. ಮಾನ್ಯ ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಪತ್ರ ದಿನಾಂಕ 01.10.2024.
2. ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂ.ಆಇ/08/ಎಸ್‌ಆರ್‌ಎಸ್/2022 ದಿನಾಂಕ. 23.06.2022

*ಪರಾಮರ್ಶಕ ಟಿಪ್ಪಣಿ:*

ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ: ಹೆಚ್. ಕೃಷ್ಣರಾಮ್‌ರವರು ಸದಸ್ಯರಾದ ಶ್ರೀ ಕೆ.ಪಿ ಪಾಟೀಲ ಮತ್ತು ಶ್ರೀಮತಿ ಶಿಲ್ಪಶ್ರೀ ರವರ ಸಹಿಯೊಂದಿಗೆ, ವಿಶ್ವವಿದ್ಯಾನಿಲಯ ಅಥವಾ ಅಂಗ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆ ಆಧಾರದಲ್ಲಿ/ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಮಾತೃತ್ವ (ಹೆರಿಗೆ) ರಜೆ ಸೌಲಭ್ಯ ವಿಸ್ತರಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸಲ್ಲಿಸಿರುತ್ತಾರೆ.

ಸರ್ಕಾರದ ಅಧಿಕೃತ ಜ್ಞಾಪನಾ ಪತ್ರದಲ್ಲಿ, ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಮತ್ತು ಅಂಗ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಮಾತೃತ್ವ ರಜೆ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಅತಿಥಿ ಉಪನ್ಯಾಸಕರಿಗೆ ಈ ಸೌಲಭ್ಯವನ್ನು ವಿಸ್ತರಿಸಿರುವ ಕುರಿತು ಯಾವುದೇ ಪ್ರಸ್ತಾಪ ಇರುವುದಿಲ್ಲ. ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಯಲ್ಲಿರುವ ಅತಿಥಿ ಉಪನ್ಯಾಸಕರಿಗೆ ಈ ಸೌಲಭ್ಯವನ್ನು ವಿಸ್ತರಿಸಿ ಆದೇಶ ಹೊರಡಿಸಿರುವುದಿಲ್ಲ. ನಮ್ಮ ವಿಶ್ವವಿದ್ಯಾಲಯದಲ್ಲಿ, ಅತಿಥಿ ಉಪನ್ಯಾಸಕರಿಗೆ ಸೆಮಿಸ್ಟರ ಆಧಾರದ ಮೇಲೆ ಪ್ರತಿ ಘಂಟೆಯ ಬೋಧನಾಅವಧಿಯ ಮೇಲೆ ಸಂಭಾವನೆ ನೀಡಲಾಗುತ್ತದೆ.ಸರ್ಕಾರದಅಧೀಕೃತಜ್ಞಾಪನ ಪತ್ರದಲ್ಲಿ ಅತಿಥಿ ಉಪನ್ಯಾಸಕರಿಗೆ ಈ ಸೌಲಭ್ಯ ವಿಸ್ತರಿಸಿಲ್ಲವಾದ್ದರಿಂದ, ಕಾಲೇಜು ಶಿಕ್ಷಣ ಇಲಾಖೆಯ ಅತಿಥಿ ಉಪನ್ಯಾಸಕರಿಗೆ ವಿಸ್ತರಿಸಿದಲ್ಲಿ ಮಾತೃತ್ವ ರಜೆ ವಿಸ್ತರಿಸಿದಲ್ಲಿ ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರಿಗೆ ಈ ಸೌಲಭ್ಯವನ್ನು ನೀಡುವ ಪ್ರಸ್ತಾವನೆಯನ್ನು ಪರಿಗಣಿಸಬಹುದಾಗಿದೆ. ಪ್ರಸ್ತುತ ತಾತ್ಕಾಲಿಕ ಸಿಬ್ಬಂದಿಗಳಿಗೆ ಮತ್ತು ಅತಿಥಿ ಉಪನ್ಯಾಸಕರಿಗೆ ಮಾತೃತ್ವ (ಹೆರಿಗೆ)ಗಾಗಿ ಬಿಡುವು ಪಡೆದು ಮರಳಿ ಕೆಲಸಕ್ಕೆ ಸೇರಲು ಅವಕಾಶ ಕಲ್ಪಿಸಲಾಗುತ್ತಿದೆ.

ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ತಾತ್ಕಾಲಿಕ ಸೇವೆಯ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಅಥವಾ ಸಂಚಿತ ವೇತನದ ಸಿಬ್ಬಂದಿಗಳಿಗೆ ಸಮನಾಗಿ ಪರಿಗಣಿಸಿದಲ್ಲಿ ಸರ್ಕಾರದ ಅಧಿಕೃತ ಜ್ಞಾಪನಾ ಪತ್ರದಲ್ಲಿ ನೀಡಲಾದ ಮಾತೃತ್ವ ರಜೆ ಸೌಲಭ್ಯವನ್ನು ತಾತ್ಕಾಲಿಕ ಸೇವೆಯ ಸಿಬ್ಬಂದಿಗಳಿಗೆ ವಿಸ್ತರಿಸಲು ಪರಿಗಣಿಸಬಹುದಾಗಿದೆ.

ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 9

Sub: Deputation of Officers/Officials against the vacant positions of the University.

Ref: 1. Letter dated 20.12.2024 received from 3 Syndicate Members
2. Government Order: No. ED493UBV 2017 (Part-4) dated. 07.11.2019

***Reference Note:***

Dr. H. Krishna Ram has submitted a representation signed by himself and Sri. K.P. Patil and Smt. Shilpa Shree, Syndicate members of BCU requesting to place the matter relating to appoint Deputy Registrars for Administration, Finance and Examination Sections and Civil Engineer on Deputation basis from other Universities.

It is submitted the Government of Karnataka in its order under reference (2) has sanctioned the following positions for direct recruitment/promotion/deputation.

1. Assistant Registrar - 2
2. Assistant Librarian - 01
3. Assistant Director of Physical Education. - 01
4. Superintendents - 05 (3 working)
5. Medical Officer - 01 (By deputation)
6. Technical Assistants - 17
7. Audit Officer - 01 (By deputation
8. Accounts Supdt. - 01 (By deputation)
9. Accounts Assistant - 01 (By deputation)
10. Lady Staff Nurse - 01
11. Personal Secretaries - 03
12. Stenographer - 02(By outsourcing)
13. Sr. Typist - 01(By outsourcing)
14. Assistants - 15(working-2)
15. Jr. Assistants - 20
16. Typists/Data Entry Assistant - 06 (By outsourcing)
17. Lab Assistant - 15(By outsourcing)
18. Driver - 04 (By outsourcing)
19. Group-D - 25 (By outsourcing) (1 working)

The posts of Deputy Registrars, Executive Engineer, Assistant Engineers, Director of Prasaranga and other posts are not sanctioned in the Government Order. The deputation is to be made against the existing vacancy. Since the posts proposed for deputation

by the Hon'ble Member are not sanctioned by the Govt., deputation of the Deputy Registrars and Engineers could not be considered at this stage.

The proposal of the Hon'ble members is placed before the Syndicate for information.

***ಸಿಂಡಿಕೇಟ್ ತೀರ್ಮಾನ:***

**ವಿಶ್ವವಿದ್ಯಾನಿಲಯ ತೆಗೆದುಕೊಂಡಿರುವ ಕ್ರಮಗಳನ್ನು ಸಿಂಡಿಕೇಟ್ ಸಭೆ ಗಮನಿಸಿತು.**

**ವಿಷಯ ಸಂಖ್ಯೆ: 10**

Sub: Request to take necessary steps to Survey the Central College Campus Land.

***Reference Note:***

Dr. H. Krishna Ram, Sri. K.P. Patil and Smt. Shilpa Shree, Syndicate members of BCU have submitted a representation requesting to place the matter before the Syndicate Meeting.

At present the University is possession of land and buildings in two blocks namely, the Central College Campus and Prasanna Kumar Block.

The proposal of the Hon'ble members is placed before the Syndicate for consideration and approval.

***ಸಿಂಡಿಕೇಟ್ ತೀರ್ಮಾನ:***

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಮೀನು ಸರ್ವೆ ಮಾಡಿಸಲು ಸಂಬಂಧಿಸಿದ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 11**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2024-25 ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ವಿಷಯಗಳ ಪರೀಕ್ಷಾ ಮಂಡಳಿಗಳನ್ನು ಅನುಮೋದಿಸುವ ಕುರಿತು.

***ಪರಾಮರ್ಶಕ ಟಿಪ್ಪಣಿ:***

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಸೆಕ್ಷನ್ 36(1)(2)(3) ರಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2024-25 ನೇ ಶೈಕ್ಷಣಿಕ ಸಾಲಿಗೆ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಮಂಡಳಿಗಳನ್ನು ದಿನಾಂಕ 02.12.2024 ಮತ್ತು 03.12.2024 ರಂದು ನಡೆದ BoAE ಸಭೆಗಳಲ್ಲಿ ರಚಿಸಲಾಗಿದ್ದು, ಸದರಿ ಪರೀಕ್ಷಾ ಮಂಡಳಿಗಳನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸಬೇಕಾಗಿತ್ತು.

ಪರೀಕ್ಷೆಗಳು ನಡೆಯುವ ದಿನಾಂಕ ಸಮೀಪಿಸಿದ ಹಿನ್ನೆಲೆಯಲ್ಲಿ ಪರೀಕ್ಷಾ ಮಂಡಳಿ ರಚಿಸಿ, ಸಂಬಂಧಪಟ್ಟ ಅಧ್ಯಕ್ಷರು ಮತ್ತು ಸದಸ್ಯರಿಗೆ ಆದೇಶ ಹೊರಡಿಸಲಾಗಿದೆ. ಆದುದರಿಂದ, ಈಗ ತೆಗೆದುಕೊಂಡಿರುವ ಕ್ರಮದ ಸ್ಥಿರೀಕರಣಕ್ಕಾಗಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

**ವಿವರಣೆ:**

ಸದಸ್ಯರಾದ ಡಾ. ಎಂ. ಆರ್. ಲಕ್ಷ್ಮೀನಾರಾಯಣರವರು ಶಿಕ್ಷಣ ವಿಷಯಕ್ಕೆ ಸಂಬಂಧಿಸಿದ ಬಿಓಎಸ್ ಸದಸ್ಯರು ಬಿಓಇಗಳಲ್ಲಿ ಸಹ ಇರುವುದನ್ನು ಅಧ್ಯಕ್ಷರ ಗಮನಕ್ಕೆ ತಂದು ಸರಿಪಡಿಸಲು ವಿನಂತಿಸಿದರು.

ಸದಸ್ಯರಾದ ಡಾ. ಬಿ. ಆರ್. ಸುಪ್ರೀತ್ ರವರು ಬಿಓಇ ರಚನೆ ಕುರಿತಂತೆ ಕೆಲವು ವಿಷಯಗಳ ಅಧ್ಯಾಪಕರಲ್ಲಿ ಅಸಮಾಧಾನ ಇರುವುದನ್ನು ಅಧ್ಯಕ್ಷರ ಗಮನಕ್ಕೆ ತಂದು ಅಧ್ಯಾಪಕರ ಸೇವಾ ಹಿರಿತನದ ಪಟ್ಟಿ (seniority list) ಯ ಆಧಾರವಾಗಿಟ್ಟುಕೊಂಡು ಬಿಓಇ ಗಳನ್ನು ರಚಿಸಬೇಕೆಂದು ತಿಳಿಸಿದರು.

ಸದಸ್ಯರಾದ ಡಾ. ಎಲಿಝಾಬೆತ್ ಜಾಸ್ಮಿನ್ ರವರು ಕೆಲವು ವಿಷಯಗಳಲ್ಲಿ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಅಧ್ಯಾಪಕರು ಲಭ್ಯವಿದ್ದರೂ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಿಂದ ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ನೇಮಕ ಮಾಡಿದ್ದಾರೆ ಎಂದು ತಿಳಿಸಿದರು.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕರ ಸಂಖ್ಯೆ ಕಡಿಮೆ ಇರುವುದರಿಂದ ಅನಿವಾರ್ಯವಾಗಿ ಬೇರೆ ವಿಶ್ವವಿದ್ಯಾನಿಲಯದ ಅಧ್ಯಾಪಕರನ್ನು ಪರೀಕ್ಷಾ ಹಾಗೂ ಶೈಕ್ಷಣಿಕ ಕೆಲಸಗಳಿಗಾಗಿ ಅವಲಂಬಿಸುವ ಅನಿವಾರ್ಯತೆ ಇದೆ. ಹಾಗಾಗಿ ಬೇರೆ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರ ಸಂಖ್ಯೆ ಹೆಚ್ಚಾಗಿದೆ ಎಂದು ಮಾನ್ಯ ಕುಲಪತಿಗಳು ತಿಳಿಸಿದರು.

ಕುಲಸಚಿವರು (ಮೌಲ್ಯಮಾಪನ) ರವರ ವಿವರಣೆ ನೀಡಿ ಪರೀಕ್ಷೆಗಳ ಹತ್ತಿರ ಬರುತ್ತಿರುವುದರಿಂದ, ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾದ ಕಾರಣದಿಂದ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಬಿಓಇ ಗಳನ್ನು ರಚಿಸಿ ಆದೇಶಗಳನ್ನು ನೀಡಲಾಗಿದೆ. ಅಧ್ಯಾಪಕರ ಸೇವಾ ಹಿರಿತನವನ್ನು ಗಮನಿಸಿ ಬಿಓಇ ರಚಿಸಲು ಅಧ್ಯಯನ ಮಂಡಳಿ ಅಧ್ಯಕ್ಷರು ಕ್ರಮ ವಹಿಸಿದ್ದಾರೆ. ರಾಜ್ಯಶಾಸ್ತ್ರ ವಿಷಯ ಕುರಿತಂತೆ ಆಕ್ಷೇಪಣೆ ಬಂದಿವೆ ಅವುಗಳನ್ನು ಮುಂದೆ ಸರಿಪಡಿಸಬಹುದು ಎಂದು ತಿಳಿಸಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಬೇಕೆಂದು ಕೋರಿದರು.

ಮುಂದಿನ ಸಲ ಅಧ್ಯಾಪಕರ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಬಿಓಇಗಳನ್ನು ರಚಿಸಬೇಕೆಂದು ಹಾಗೂ ಅವುಗಳನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಬೇಕೆಂದು ಸಭೆ ಸೂಚಿಸಿತು.

***ಸಿಂಡಿಕೇಟ್ ತೀರ್ಮಾನ:***

**ಪರೀಕ್ಷಾ ಮಂಡಳಿಗಳನ್ನು ರಚಿಸಿ ಆದೇಶಗಳನ್ನು ಹೊರಡಿಸಲು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 12

Sub: Fee Structure for Admission to First Year Ph.D. Programme for 2024-25 in the Faculty of Arts, Science, Commerce and Education of Bengaluru City University.

Ref: This Office Notification No:BCU/Ex.Br.II/Ph.D./Admn/2023-24 dated: 13.03.2024 and 15.04.2024

***Reference Note:***

Bengaluru City University had invited the applications for admission to Ph.D. Programme for the academic year 2024-25 in respect of subjects wherever recognised Guides are available in the University PG Departments and the Research Centers Recognised by Bengaluru City University.

Further, the Fee Structure for Admission to Ph.D. Programme prescribed by Bangalore University and University if Mysore were received in the office of the Registrar (Evaluation) for the year 2024-25. The Comparative statement of both the University are placed separately for perusal of the Syndicate. On verification of the both University fee structure, it is better to adopt the same fee structure in Bengaluru City University also, because we are following many rules and regulations of parent University.

The Fee Structure of Bengaluru University will be adopted and follow the same for admission to Ph.D. Programme 2024-25 in the Faculty of Arts, Science, Commerce and Education in Bengaluru City University is placed before the Syndicate for consideration and approval.

*ಸಿಂಡಿಕೇಟ್ ತೀರ್ಮಾನ:*

ಪಿ.ಹೆಚ್.ಡಿ ವ್ಯಾಸಂಗಕ್ಕೆ ಪ್ರವೇಶ ಪಡೆದ ಪ್ರಥಮ ವರ್ಷದ ಸಂಶೋಧನಾ ವಿದ್ಯಾರ್ಥಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ ನಿಗದಿಪಡಿಸಿದ ಶುಲ್ಕದ ದರಗಳನ್ನು ಅನ್ವಯಿಸಿಕೊಳ್ಳಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಲು ತೀರ್ಮಾನಿಸಿತು.

ಇದೇ ಹಂತದಲ್ಲಿ ಬೇರೆ ಸದಸ್ಯರು ಕೆಲವು ವಿಷಯಗಳನ್ನು ಪ್ರಸ್ತಾಪಿಸಲು ಅನುಮತಿ ಕೋರಲು, ಅವಧಿ ಪೂರ್ಣಗೊಳಿಸಿದ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಇವುಗಳ ಕುರಿತು ಪ್ರಸ್ತಾಪಿಸಬಹುದೆಂದು ಮಾನ್ಯ ಕುಲಪತಿಗಳು ಹೇಳಿದರು.

ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿ ಕೊಟ್ಟಿರುವುದಕ್ಕೆ ಮಾನ್ಯ ಕುಲಪತಿಗಳಿಗೆ ಮತ್ತು ಸಭೆಯಲ್ಲಿ ಭಾಗವಹಿಸಿದ ಎಲ್ಲ ಗೌರವಾನ್ವಿತ ಸದಸ್ಯರಿಗೆ ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು |
| ಸದಸ್ಯಕಾರ್ಯದರ್ಶಿಗಳು | ಸಭಾಧ್ಯಕ್ಷರು |

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು